# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 01
ಪಿಡಬ್ಲ್ಯೂ: 01

**ದಿನಾಂಕಃ 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ಕರಿಯಪ್ಪ

ತಂದೆಯ ಹೆಸರು : ರೇವಣಸಿದ್ದಪ್ಪ

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ಬೆಣ್ಣೆಹಳ್ಳಿ, ಹರಪನಹಳ್ಳಿ ತಾಲ್ಲೂಕು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಇಬ್ಬರು ಮಕ್ಕಳು. ಅವರೆಂದರೆ ಕರಿಬಸಜ್ಜ ಮತ್ತು ಸುಮ. ಸುಮಳನ್ನು ಆರೋಪಿ ನಾರಪ್ಪನಿಗೆ ಕೊಟ್ಟು ಸಿರಿಗೆರೆಯಲ್ಲಿ ದಿನಾಂಕಃ **25–12–2015** ರಂದು ಸಾಮೂಹಿಕ ವಿವಾಹದಲ್ಲಿ ಮದುವೆ ಮಾಡಿಕೊಟ್ಟಿದ್ದೆ. ಮದುವೆಯಾದ ನಂತರ ಗಂಡ ಹೆಂಡತಿ ಕೋಣನೂರಿನಲ್ಲಿ ವಾಸ ಮಾಡುತ್ತಿದ್ದರು. **3–4** ವರ್ಷ ಗಂಡ ಹೆಂಡತಿ ಅನ್ಯೋನ್ಯವಾಗಿದ್ದರು. ಅವರಿಗೆ ಒಂದು ಗಂಡು ಮಗು ಜನಿಸಿತ್ತು.

**2.** ಆ ನಂತರ ಆರೋಪಿ ನನ್ನ ಮಗಳಿಗೆ ನಿನ್ನ ತಂದೆಯಿಂದ ವರದಕ್ಷಿಣೆ ಪಡೆದುಕೊಂಡು ಬಾ ಎಂದು ಕಿರಿಕಿರಿ ಮಾಡಲು ಪ್ರಯತ್ನಿಸಿದ. ಹಣ ತೆಗೆದುಕೊಂಡು ಬಾ, ಬಂಗಾರ ತೆಗೆದುಕೊಂಡು ಬಾ ಎಂದು ಆಕೆಗೆ ಹೊಡಿ ಬಡಿ ಮಾಡಿ ಹಿಂಸೆ ಕೊಡಲು ಪ್ರಾರಂಭಿಸಿದ. ಆ ವಿಷಯವನ್ನು ನನ್ನ ಮಗಳು ಸುಮ ನನ್ನ ಅತ್ತಿಗೆ ರೇಣುಕಮ್ಮ, ಹಾಗೂ ರೇಣುಕಮ್ಮನ ಮಗಳು ದೋಸಾ–**23** ದೇವೀರಮ್ಮ, ಹಾಗೂ ದೋಸಾ–**24** ದೊಡ್ಡ ಬಸಜ್ಜ ಇವರಿಗೆ ತಿಳಿಸುತ್ತಿದ್ದಳು. ನನ್ನ ಮಗ ದೋಸಾ–**15** ಕರಿಬಸಜ್ಜನಿಗೂ ತಿಳಿಸಿದ್ದಳು.

**3.** ಸುಮ ತೀರಿಹೋಗಿದ್ದಾಳೆ. ಆಕೆ ಸಾಯುವುದಕ್ಕಿಂತ **1** ವರ್ಷದ ಹಿಂದೆ ಗೌರಿ ಹುಣ್ಣಿಮೆಗೆ ಆಕೆ ತನ್ನ ಗಂಡ ಆರೋಪಿ ಹಾಗೂ ಮಗುವಿನ ಜೊತೆಗೆ ನಮ್ಮ ಊರಿಗೆ ಬಂದಿದ್ದಳು. ಆಗ ನನ್ನ ಮಗಳು ಸುಮ ತನ್ನ ಗಂಡ ತನಗೆ ವರದಕ್ಷಿಣೆ ಕೊಟ್ಟಿಲ್ಲ ಎಂದು ದುಡ್ಡು ಬಂಗಾರ ತೆಗೆದುಕೊಂಡು ಬಾ ಎಂದು ಹಿಂಸೆ ಮಾಡುತ್ತಿದ್ದಾನೆಂದು ಹೇಳಿದ್ದಳು. ಆಗ ನಾನು ಆಕೆಗೆ ಮನೆ ಕಟ್ಟಿಸಬೇಕಾಗಿದೆ, ಮಗನ ಮದುವೆ ಮಾಡಬೇಕಾಗಿದೆ. ಮದುವೆಯಲ್ಲಿ ಏನಾದರೂ ಕೊಡುತ್ತೇನೆ ಎಂದು ಹೇಳಿ ಸಮಾಧಾನ ಮಾಡಿ ಗಂಡನ ಮನೆಗೆ ಕಳುಹಿಸಿದೆ.

**4.** ಅದಾದ ನಂತರ ಒಂದು ಸಲ ನಾನು ಕೋಣನೂರಿಗೆ ಹೋಗಿದ್ದೆ. ಆಗ ಅಕ್ಕಪಕ್ಕದ ಮನೆಯವರು ಆರೋಪಿ ಕುಡಿದು ಬಂದು ಸುಮಾಳಿಗೆ ಹೊಡಿ ಬಡಿ ಮಾಡಿ ಕಿರುಕುಳ ಕೊಡುತ್ತಿದ್ದಾನೆಂದು ತಿಳಿಸಿದರು. ನಾನು ಆರೋಪಿಗೆ ಬುದ್ದಿ ಹೇಳಿ ಬಂದಿದ್ದೆ. ನನಗೂ ಹೊಲ ಮನೆ ಇಲ್ಲ, ದುಡಿದೇ ತಿನ್ನಬೇಕು. ಮಗನಿಗೂ ಒಂದು ವ್ಯವಸ್ಥೆ ಮಾಡಬೇಕು, ಆತನ ಮದುವೆಯಷ್ಟರಲ್ಲಿ ಏನಾದರೂ ವ್ಯವಸ್ಥೆ ಮಾಡುತ್ತೇನೆಂದು ಆತನಿಗೆ ತಿಳುವಳಿಕೆ ಹೇಳಿದ್ದೆ, ಮಗಳಿಗೂ ಸಮಾಧಾನ ಹೇಳಿ ಬಂದಿದ್ದೆ. ಮದುವೆಯ ಕಾಲಕ್ಕೆ ಆರೋಪಿ ಸುಮ್ಮನೇ ಊರಲ್ಲಿ ತಿರುಗಾಡಿಕೊಂಡಿದ್ದ. ಆತನ ಕುಟುಂಬಕ್ಕೆ ಜಮೀನು ಇದ್ದು ಆತನ ತಂದೆ ಅದನ್ನು ಉಳುಮೆ ಮಾಡುತ್ತಿದ್ದರು. ಮದುವೆಯಾದ ನಂತರವೂ ಅದನ್ನೇ ಮುಂದುವರೆಸಿದ್ದ. ಆ ನಂತರ ಚಿತ್ರದುರ್ಗದಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದ. ಆತ ತನಗೆ ಬಂದಿದ್ದ ಸಂಬಳವನ್ನು ಮನೆಗೆ ಕೊಡುತ್ತಿರಲಿಲ್ಲ. ಕುಡಿಯುತ್ತಿದ್ದ, ಇಸ್ಪೀಟ್ ಆಡುತ್ತಿದ್ದ, ಅದಕ್ಕೆ ಹಣ ಸುರಿಯುತ್ತಿದ್ದ.

**5.** ಸುಮ ಸಾಯುವುದಕ್ಕಿಂತ ಸುಮಾರು **15** ದಿನ ಮೊದಲು ಆರೋಪಿ ಮಗುವನ್ನು ಕರೆದುಕೊಂಡು ನಮ್ಮ ಊರಿಗೆ ಬಂದಿದ್ದ. ನಾನು ಕೆಲಸಕ್ಕೆ ಹೋಗಿದ್ದೆ. ಆಗ ಆರೋಪಿ ಮಗುವನ್ನು ನಮ್ಮ ಅತ್ತಿಗೆ ಮಗಳು ದೋಸಾ–**23** ದೇವೀರಮ್ಮನ ಮನೆಯಲ್ಲಿ ಮಗುವನ್ನು ಬಿಟ್ಟು ಕೊಣನೂರಿಗೆ ಹೊರಟು ಹೋಗಿದ್ದ. ಮರು ದಿನ ಪುನಃ ನಮ್ಮ ಊರಿಗೆ ಬಂದು ಮಗುವನ್ನು ಕರೆದುಕೊಂಡು ಹೊರಟು ಹೋಗಿದ್ದ.

ಆಗಲೂ ನಾನು ಮನೆಯಲ್ಲಿರಲಿಲ್ಲ. ಕೆಲಸಕ್ಕೆ ಹೋಗಿದ್ದೆ. ಎರಡು ದಿನದ ನಂತರ ನಾನು ಆರೋಪಿಗೆ ಫೋನ್ ಮಾಡಿದೆ. ಸುಮಾಳ ಕೈಯಲ್ಲಿ ಫೋನ್ ಕೊಡು ಎಂದು ಹೇಳಿದೆ. ಆಗ ಆರೋಪಿ ನಾನು ಅಲ್ಲಿ ಇಲ್ಲಿ ಇದ್ದೇನೆ ಎಂದು ಹೇಳಿದ **3–4** ಸಲ ಫೋನ್ ಮಾಡಿದರೂ ಅದೇ ರೀತಿ ಹೇಳಿದ. ದುರ್ಗದಲ್ಲಿ ಇದ್ದೇನೆ ಎಂದು ಹೇಳಿದ. ಊರಿಗೆ ಹೋದ ನಂತರ ಫೋನ್ ನನ್ನ ಮಗಳ ಕೈಯಲ್ಲಿ ಕೊಡುತ್ತೇನೆ ಎಂದು ಹೇಳಿದ್ದ. **10** ನಿಮಿಷದ ನಂತರ ನಾನು ಪುನಃ ಫೋನ್ ಮಾಡಿದಾಗ ಆರೋಪಿ ಇಲ್ಲ ಮಾವ ನಿನ್ನ ಮಗಳು ಎಲ್ಲೋ ಹೋಗಿದ್ದಾಳೆ ಎಂದು ಹೇಳಿದ.

**6.** ಮರು ದಿನ ನಾನು ನಮ್ಮ ಊರಿನಿಂದ ಕೊಣನೂರಿಗೆ ಹೋದೆ. ಆರೋಪಿ ಮನೆಯಲ್ಲಿದ್ದ. ಆತನನ್ನು ಕೇಳಿದಾಗ ಎಲ್ಲಾ ಕಡೆ ಹುಡುಕಾಡಿದ್ದಾಗಿ ಸುಮ ಎಲ್ಲಿಯೂ ಸಿಕ್ಕಿಲ್ಲ ಎಂದು ಹೇಳಿದ. ನಾನು ಮತ್ತು ಆರೋಪಿ ಸೇರಿ ಹೊಲ, ಅಡಿವಿ, ಕೆರೆ, ಬಾವಿ ಹುಡುಕಾಡಿ ಬಂದೆವು. ಆದರೆ ಆಕೆ ಪತ್ತೆಯಾಗಲಿಲ್ಲ. ಆಗ ಆರೋಪಿ ದೂರು ಕೊಡೋಣ ಬಾ ಎಂದು ಹೇಳಿದ. ಇಬ್ಬರೂ ಸೇರಿ ಭರಮಸಾಗರ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ಆರೋಪಿ ಸುಮ ಕಾಣೆಯಾಗಿದ್ದಾಳೆಂದು ಒಂದು ದೂರು ಕೊಟ್ಟ. ನಾನು ಸುಮಾಳ ಸ್ನೇಹಿತೆಯರು ಹಾಗೂ ನಮ್ಮ ಎಲ್ಲಾ ಬಂದು ಬಳಗದವರಿಗೂ ವಿಚಾರಿಸಿ ಸುಮಾಳ ಬಗ್ಗೆ ಕೇಳಿದಾಗ ಆಕೆ ಪತ್ತೆಯಾಗಲಿಲ್ಲ.

**7.** **4–5** ದಿನದ ನಂತರ ನಾನು ಪುನಃ ಕೊಣನೂರಿಗೆ ಹೋದೆ. ಆರೋಪಿಗೆ ಫೋನ್ ಮಾಡಿದಾಗ ಅದು ಸ್ವಿಚ್ ಆಫ್ ಆಗಿತ್ತು. ನಾನು ಮನೆಗೆ ಹೋದೆ. ಮನೆಯ ಚಿಲಕ ಹಾಕಿತ್ತು. ಚಿಲಕ ತೆಗೆದು ಒಳಗೆ ಹೊದೆ. ನನಗೆ ಮನೆ ಒಳಗೆ ವಾಸನೆ ಬಂದಂತೆ ಆಯಿತು. ಮನೆಯಲ್ಲಿ ಒಂದು ಮಂಚ ಇತ್ತು. ಆ ಮಂಚವನ್ನು ಎಳೆದು ನೋಡಿದೆ. ಆಗ ಅಲ್ಲಿ ಸಿಮೆಂಟ್ ಹಾಕಿ ಕಡಪಾ ಕಲ್ಲು ಉಬ್ಬಿದಂತೆ ಮೇಲೆ ಬಂದಿತ್ತು. ನನಗೆ ಅನುಮಾನ ಬಂದು ನನ್ನ ಮಗ ಮತ್ತು ಬಂದು ಬಳಗದವರಿಗೆ ಫೋನ್ ಮಾಡಿದೆ. ನಾನು ಠಾಣೆಗೆ ಹೋಗಿ ದೂರು ಕೊಟ್ಟೆ. ನಾನು ನೀಡಿದ ದೂರನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ನಿಪಿ–**1** ಎಂದು ನನ್ನ

ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ಆ ದೂರನ್ನು ನನ್ನ ಅತ್ತಿಗೆಯ ಮಗ ಬಸವರಾಜ್ ಅಲಿಯಾಸ್ ದೊಡ್ಡಬಸಜ್ಜ ಈತನಿಂದ ಬರೆಸಿದ್ದೆ.

**8**. ದೂರು ಕೊಟ್ಟ ನಂತರ ಪೊಲೀಸರು ಕೋಣನೂರಿನಲ್ಲಿಯ ಆರೋಪಿಯ ಮನೆಗೆ ಬಂದರು. ನಾನು ಪೊಲೀಸರಿಗೆ ಜಾಗ ತೋರಿಸಿದೆ. ಪೊಲೀಸರು ಆ ಸ್ಥಳದಲ್ಲಿ ಚಕ್ಕುಬಂದಿ ಹಾಕಿದರು, ಪರಿಶೀಲನೆ ಮಾಡಿದರು. ಆಗ ಒಂದು ಪಂಚನಾಮೆ ತಯಾರಿಸಿದ್ದು, ಅದಕ್ಕೆ ನನ್ನ ಸಹಿ ತೆಗೆದುಕೊಂಡಿದ್ದರು. ಆ ಪಂಚನಾಮೆಯನ್ನು ನಿಪಿ–**2** ಎಂದು ನನ್ನ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು. ಆ ಪಂಚನಾಮೆಯನ್ನು ಮದ್ಯಾಹ್ನ **12.00** ರಿಂದ **1.00** ಗಂಟೆಯವರೆಗೆ ಮಾಡಿದ್ದರು. ಅಲ್ಲಿ ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ನಿಪಿ–**3** ಮತ್ತು **4** ಎಂದು ಗುರುತಿಸಲಾಯಿತು. ಆ ಫೋಟೋಗಳಲ್ಲಿ ನಾನು, ಪೊಲೀಸರು, ಜಯಶೀಲ ಮತ್ತು ತಿಪ್ಪಯ್ಯ ಕಾಣುತ್ತಿದ್ದೇವೆ.

**9**. ಆ ನಂತರ ಅಲ್ಲಿ ಎ.ಸಿ., ಗ್ರಾಮಸ್ಥರು ಬಂದಿದ್ದರು. ಅಲ್ಲಿ ಅಗೆದು ನೋಡಿದಾಗ ಒಳಗೆ ಶವ ಇತ್ತು. ಆ ಶವವನ್ನು ಅಗೆದು ಹೊರಗೆ ತೆಗೆದರು. ಮುಖ ಕಾಣುವಂತೆ ಇರಲಿಲ್ಲ. ಆದರೆ ಬಟ್ಟೆಯ ಮೇಲಿಂದ ಅದು ನನ್ನ ಮಗಳು ಸುಮಾಳ ಶವ ಎಂದು ಗುರುತಿಸಿದೆ. ಆಗ ಅಲ್ಲಿ ಎರಡು ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ನಿಪಿ–**5** ಮತ್ತು **6** ಎಂದು ಗುರುತಿಸಲಾಯಿತು. ಶವವನ್ನು ಅಲ್ಲಿಂದ ಸಿರಿಗೆರೆಯ ಆಸ್ಪತ್ರೆಗೆ ಸಾಗಿಸಿದರು.

**10**. ಶವ ಸಾಗಿಸಿದ ನಂತರ ಆ ಮನೆಯಲ್ಲಿ ಪೊಲೀಸರು ಪರಿಶೀಲನೆ ಮಾಡಿ ಒಂದು ಪಂಚನಾಮೆ ತಯಾರಿಸಿದ್ದರು. ನಾನು ಜಾಗವನ್ನು ತೋರಿಸಿದ್ದೆ. ಆ ಪಂಚನಾಮೆಯನ್ನು ನಿಪಿ–**7** ಎಂದು ನನ್ನ ಸಹಿಯನ್ನು ನಿಪಿ–**7**(ಎ) ಎಂದು ಗುರುತಿಸಲಾಯಿತು. ಆಗ ಫೋಟೋಗಳನ್ನು ತೆಗೆದಿದ್ದು ಆ ಎರಡು

ಪೋಟೋಗಳನ್ನು ನಿಪಿ–**8** ಮತ್ತು **9** ಎಂದು ಗುರುತಿಸಲಾಯಿತು. ಆ ಪಂಚನಾಮೆಯನ್ನು ಮದ್ಯಾಹ್ನ **2.00** ರಿಂದ **3.00** ರವರೆಗೆ ತಯಾರಿಸಿದರು.

**11.** ನಾನು ನನ್ನ ಮಗಳಿಗೆ ಕೊಟ್ಟಿದ್ದ ಬಾಂಡೆ ಸಾಮಾನುಗಳನ್ನು, ಮಗುವಿಗೆ ನೀಡಿದ್ದ ಬೆಳ್ಳಿಯ ಕಾಲ್ ಕಡಗ, ಕೈ ಕಡಗ, ಲಿಂಗದಕಾಯಿ ಮತ್ತು ಉಡುದಾರ ಇವುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಒಟ್ಟು **16–17** ಸಾಮಾನುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಆಗ ಒಂದು ಪಂಚನಾಮೆ ತಯಾರಿಸಿದ್ದು, ಆ ಪಂಚನಾಮೆಯನ್ನು ನಿಪಿ–**10** ಎಂದು ನನ್ನ ಸಹಿಯನ್ನು ನಿಪಿ–**10**(ಎ) ಎಂದು ಗುರುತಿಸಲಾಯಿತು. ಆಗ ಪೋಟೋಗಳನ್ನು ತೆಗೆದಿದ್ದು ಆ ಪೋಟೋಗಳನ್ನು ನಿಪಿ–**11** ಮತ್ತು **12** ಎಂದು ಗುರುತಿಸಲಾಯಿತು.

**12.** ಅದಾದ ನಂತರ ಪೊಲೀಸರು ನನ್ನನ್ನು ಚಿತ್ರದುರ್ಗಕ್ಕೆ ಕರೆಸಿದ್ದರು. ಅಲ್ಲಿ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮಾಡಿಕೊಂಡಿದ್ದರು. ಈಗ ವಿ.ಸಿ.ಯಲ್ಲಿ ಕಾಣುವ ಆರೋಪಿಯೇ ನನ್ನ ಅಳಿಯ ನಾರಪ್ಪನಾಗಿದ್ದಾನೆ. ಆರೋಪಿ ನನ್ನ ಮಗಳು ಸುಮಾಳಿಗೆ ತಲೆಗೆ ಒನಕೆಯಿಂದ ಹೊಡೆದು ಕೊಲೆ ಮಾಡಿ ಮನೆಯಲ್ಲಿ ಕಡಪ ಕಲ್ಲುಗಳನ್ನು ತೆಗೆದು, ಗುಂಡಿ ಮಾಡಿ ಒಳಗೆ ಹೂತುಹಾಕಿ ಕಡಪ ಕಲ್ಲುಗಳನ್ನು ಪುನಃ ಇಟ್ಟು, ಸಿಮೆಂಟನ್ನು ಸವರಿದ್ದ.

**13.** ನನ್ನ ಮಗಳಿಗೆ ನಾನು ನೀಡಿದ್ದ ಹಾಗೂ ಪೊಲೀಸರು ಆರೋಪಿಯ ಮನೆಯಿಂದ ಜಪ್ತಿ ಮಾಡಿದ್ದ ಆ ವಸ್ತುಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಒಂದು ಚಿಕ್ಕ ಸ್ಟೀಲ್ ಕೊಡ, ಎರಡು ಸ್ಟೀಲ್ ಡಬ್ಬಗಳು, **7** ದೊಡ್ಡ ಸ್ಟೀಲಿನ ಲೋಟಗಳು, **7** ಚಿಕ್ಕ ಸ್ಟೀಲಿನ ಲೋಟಗಳು, ಒಂದು ಸ್ಟೀಲ್ ಚೊಂಬು, ಒಂದು ಕಳಸದ ತಟ್ಟೆ, ಸಾಮ್ರಾಣಿ ಹಾಕಮ ಉದ್ದರಣೆ, ಎರಡು ಹಿತ್ತಾಳೆಯ ಕಾಲು ದೀಪ, ಒಂದು ಹಿತ್ತಾಳೆಯ ಊದುಬತ್ತಿ ಇಡುವ ಸ್ಟಾಂಡ್, ಒಂದು ಹಿತ್ತಾಳೆಯ ಗಂಟೆ, ಹಿತ್ತಾಳೆಯ ಮಂಗಳಾರತಿ ಮಾಡುವ ಉದ್ದರಣೆ, **5** ಚಿಕ್ಕ ಚಮಚಗಳು, ಟೀ ಸೋಸುವ ಜರಡಿ ಇವುಗಳನ್ನು ನೋಡಿ

ಗುರುತಿಸುತ್ತಿದ್ದು ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು **1** ರಿಂದ **13** ಎಂದು ಗುರುತಿಸಲಾಯಿತು. ಬೆಳ್ಳಿಯಂತೆ ಇರುವ ಎರಡು ಚಿಕ್ಕ ಕಾಲು ಕಡಗ, ಒಂದು ಕೈಕಡಗ, ಒಂದು ಲಿಂಗದ ಕಾಯಿ, ಹಾಗೂ ಉಡುದಾರ ಇವುಗಳನ್ನು ನೋಡಿ ಗುರುತಿಸುತ್ತಿದ್ದು, ಸದರಿಯವುಗಳನ್ನು ಕ್ರಮವಾಗಿ ಮುದ್ದೆ ಮಾಲು **14** ರಿಂದ **17** ಎಂದು ಗುರುತಿಸಲಾಯಿತು.

**14.** ನನ್ನ ಮಗಳು ಸುಮ ವರದಕ್ಷಿಣೆ ರೂಪದಲ್ಲಿ ದುಡ್ಡು ಮತ್ತು ಬಂಗಾರ ತರದೇ ಇದ್ದ ಕಾರಣ ಆರೋಪಿ ಆಕೆಯನ್ನು ಹೊಡೆದು ಕೊಲೆ ಮಾಡಿದ್ದ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.